ಶ್ರೀ ಎಸ್.ಆರ್. ಮೋರೆ : ನಮ್ಮ ಸದಸ್ಯರು ಏನಾದರೂ ಅಂತಹ ಸಲಹೆ ಕೊಟ್ಟರೆ ಮತ್ತು ಯಾವುದಾದರೂ ಜಾಗ ತೋರಿಸಿದರೆ, ಅದನ್ನು ನಾನು ಕುಡ್ಸೆಂಪ್‌ನವರಿಗೆ ಮತ್ತು ಮುನಿಸಿ ಪಾಲಿಟಿಯವರಿಗೆ ಹೇಳುತ್ತೇನೆ. ಅದನ್ನು ಬೇಕಾದರೆ, ನಾವು ಅವರಿಗೆ ಪರಿಹಾರ ಕೊಟ್ಟು ತೆಗೆದುಕೊಳ್ಳಬಹುದು. ಮತ್ತೆ ಸದ್ಯದ ಪರಿಸ್ಥಿತಿಗೆ ಬೀಡಿನಗುಡ್ಡೆಯಲ್ಲಿರತಕ್ಕ ತ್ಯಾಜ್ಯ ವಸ್ತುವನ್ನು ಮಲ್ಪೆ ಸಮುದ್ರ ದಂಡೆಯ ಮೇಲೆ ಕಳುಹಿಸುತ್ತಿದ್ದೇವೆ. ಅದಕ್ಕೆ ಸುಮಾರು 10 ಲಕ್ಷ ರೂಪಾಯಿ ಖರ್ಚಾಗುತ್ತಿದೆ.

ಕೆ.ಜಿ.ಎಫ್.ಗೆ ಕೆ.ಯು.ಐ.ಡಿ.ಎಫ್.ಸಿ ನಿಧಿಯಿಂದ ಹಣ

134(879) : ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) ಮಾನ್ಯ ಪೌರಾಡಳಿತ ಹಾಗೂಕೆ.ಯು.ಐ.ಡಿ.ಎಫ್.ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಯು.ಐ.ಡಿ.ಎಫ್.ಸಿ. ನಿಧಿಯಿಂದ ಕೋಲಾರ ಜಿಲ್ಲೆಯನ್ನು ಅದರಲ್ಲೂ ಮುಖ್ಯವಾಗಿ ಕೆ.ಜಿ.ಎಫ್. ಪಟ್ಟಣವನ್ನು ಅಭಿವೃದ್ಧಿ ಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಕೈಗೊಂಡ ಯೋಜನೆಗಳ ವಿವರಗಳನ್ನು ಒದಗಿಸುವುದು;

ಇ) ಏ.ಡಿ.ಬಿ. ಮೂಲಕ ಪಡೆದಿರುವ ಹಣ?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ನಾನು ಸಿಂಪಲ್ ಪ್ರಶ್ನೆ ಕೇಳಿದ್ದೇನೆ. Whether there is any proposal before the Government to develop Kolar district; Particularly the KGF under the KUIDFC funds? ಸರ್ಕಾರದ ಉತ್ತರ ಏನೆಂದರೆ, "ಇಲ್ಲ" ಅದರ ಜೊತೆಗೆ, "B" If so, the details of the projects undertaken? Does not arise. C The amount raised through the ADB Bank? Does not arise. ಈ ರೀತಿಯ ಉತ್ತರ ಸರ್ಕಾರದಿಂದ ಬಂದರೆ, What for this Department should have in this State? ಇದಕ್ಕೆ ಉತ್ತರ ಕೊಡಿ.

ಶ್ರೀ ಎಸ್.ಆರ್. ಮೋರೆ : ಮಾನ್ಯ ಅಧ್ಯಕ್ಷರೆ, ಕೆ.ಜಿ.ಎಫ್.ಗೆ ನಾವು ಗವರ್ನಮೆಂಟ್ ಆಫ್ ಇಂಡಿಯಾದ ಐ.ಡಿ. ಎಸ್.ಎಂ.ಟಿ. ಪ್ರಕಾರ ಪ್ರಸ್ತಾವನೆಯನ್ನು ಕಳುಹಿಸಿದ್ದೇವೆ. ಸುಮಾರು 550 ಲಕ್ಷ ರೂಪಾಯಿ. ಅದರಲ್ಲಿ ಏನಿದೆಯೆಂದರೆ, ಒಂದು ಕಲ್ಯಾಣ ಮಂಟಪ, ಒಂದು ಸ್ಟೇಡಿಯಂ, ಒಂದು ಮಳಿಗೆ ಮತ್ತು ರಸ್ತೆ ಅಭಿವೃದ್ಧಿ ಮಾಡುವುದು. ಈಗಾಗಲೇ ನಾವು ಈ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ. ಆದರೆ, ಅವರು ಡೀಟೈಲ್ಸ್ ಕೇಳಿದ್ದಾರೆ. ಕೆ.ಜಿ.ಎಫ್. ನವರು ಡೀಟೈಲ್ಸ್ ಕಳುಹಿಸಿಕೊಟ್ಟರೆ, ಕೆಲಸ ಆರಂಭ ಮಾಡುತ್ತೇವೆ.

ಶ್ರೀ ಎಸ್. ರಾಜೇಂದ್ರನ್ : ಎಲ್ಲಿಗೆ ಕಳುಹಿಸಿದಿರಿ, ಏಕೆ ಕಳುಹಿಸಿದಿರಿ, ಯಾವಾಗ ಕಳುಹಿಸಿದಿರಿ, ನಾನು ಕೇಳಿರುವುದೇನು? ಕೆ.ಯು.ಐ.ಡಿ.ಎಫ್.ಸಿ. ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಫಂಡ್ ಬಗ್ಗೆ ಕೇಳಿದ್ದೇನೆ. ಯಾವಾಗ ಕಳುಹಿಸಿದ್ದೀರಿ?

ಶ್ರೀ ಎಸ್.ಆರ್. ಮೋರೆ : ಕೆ.ಯು.ಐ.ಡಿ.ಎಫ್.ಸಿ. ಪ್ಯಾರಾಮೀಟರ್ ಪ್ರಕಾರ ನಿಮ್ಮ ಕೆ.ಜಿ.ಎಫ್. ಅಲ್ಲಿ ಬರುವುದೇ ಇಲ್ಲ. ಇಲ್ಲಿ ಪ್ರಾಜೆಕ್ಟ್ ಮಾಡಬೇಕಾದರೆ ಒಂದು ಪ್ಯಾರಾ ಮೀಟರ್ ಇದೆ. ಎ.ಡಿ.ಬಿ. ದಾಗಲೀ, ವರ್ಲ್ಡ್ ಬ್ಯಾಂಕಿನದಾಗಲೀ.

ಶ್ರೀ ಎಸ್. ರಾಜೇಂದ್ರನ್ : ಅದು ಏಕೆ ಬರುವುದಿಲ್ಲ? what for the Department, when that is not entitled to my KGF, ಆ ಕಮಿಟಿಯೇ ಬೇಡ ಡಿಸಾಲ್ವ್ ಮಾಡಿ. ಆ ಡಿಪಾರ್ಟ್‌ಮೆಂಟೇ ಬೇಡ. ಕ್ಲೋಸ್ ಮಾಡಿ. When the department is not useful to my city, what for that? ನೀವೇ ಹೇಳುತ್ತೀರಿ. ಅದು ಏಕೆ ಬರುವುದಿಲ್ಲ? ಅದು ಬಂದರೆ untouchable ಆಗುತ್ತದೆಯೇ?

ಶ್ರೀ ಎಸ್.ಆರ್. ಮೋರೆ : ನಿಮ್ಮ ಕೆ.ಜಿ.ಎಫ್. ಸಣ್ಣ ಪಟ್ಟಣ ಇರುವುದರಿಂದ ನಿಮಗೆ ಸಂಪನ್ಮೂಲ ಕಡಿಮೆ ಇರುತ್ತದೆ. ಒಂದು ಪ್ಯಾರಾ ಮೀಟರ್ ಹಾಕಿಕೊಂಡಿದ್ದೇವೆ, ಆ ಪ್ರಕಾರ ನೀವು ಎಲಿಜಿಬಿಲಿಟಿ ಇಲ್ಲ. ಇವರು ಕೆ.ಯು.ಐ.ಡಿ.ಎಫ್.ಸಿ. ಫಂಡ್ ಕೇಳಬೇಕಾದರೆ, ಅಲ್ಲಿ ಸಂಪನ್ಮೂಲ ಜಾಸ್ತಿ ಇರಬೇಕಾಗುತ್ತದೆ. ಕೋಟಿಗಟ್ಟಲೆ ಇರಬೇಕಾಗುತ್ತದೆ. ಆದರೆ, ಕೋಟಿಗಟ್ಟಲೆ ಹಣ ಅಲ್ಲಿ ಖರ್ಚು ಮಾಡಬಹುದು. ಆದರೆ, ಎ.ಡಿ.ಬಿ. ಪ್ರಾಜೆಕ್ಟ್‌ನಲ್ಲೂ ತಮ್ಮದು ಎಲಿಜಬಿಲಿಟಿ ಇಲ್ಲ. ಮತ್ತೆ ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್‌ನಲ್ಲೂ ಎಲಿಜಬಿಲಿಟಿ ಇಲ್ಲ. ಆದರೂ, ನಾವು ಕೈಬಿಟ್ಟಿಲ್ಲ. ನಾನು ಕೇಂದ್ರ ಸರ್ಕಾರದ ಐ.ಡಿ.ಎಸ್.ಎಂ.ಟಿ. ಯೋಜನೆಯಲ್ಲಿ ತೆಗೆದುಕೊಂಡು, ನಾವು ಮಾಡುತ್ತಾ ಇದ್ದೇವೆ. ಸುಮಾರು 550 ಲಕ್ಷ ರೂ. ಎಸ್ಟಿಮೇಟನ್ನು ಈಗಾಗಲೇ ರೆಡಿ ಮಾಡಿದ್ದೇವೆ. ಅದರ ಪ್ರಕಾರ ಕಲ್ಯಾಣ ಮಂಟಪ, ಸ್ಟೇಡಿಯಂ ಮತ್ತು ನಿಮ್ಮ ರೋಡುಗಳನ್ನು ಮಾಡಿಕೊಡುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹಾಗಾದರೆ, ಸಂಪನ್ಮೂಲ ಕೊರತೆ ಇರತಕ್ಕಂಥ ಮತ್ತು ಸಂಪನ್ಮೂಲಗಳಿಲ್ಲದೇ ಇರತಕ್ಕಂಥ ಹಿಂದುಳಿದಂಥ ಪಟ್ಟಣಗಳು ಮತ್ತು ನಗರಗಳಿದ್ದರೆ ಅಲ್ಲಿ ನೀವೇನೂ ಅಭಿವೃದ್ಧಿ ಮಾಡುವುದಿಲ್ಲವೆಂದು ಹೇಳಿದರೆ, ಅಲ್ಲಿ ಹಿಂದುಳಿದವರು ಹಾಗೆಯೇ ಇರಬೇಕೇ?

ಶ್ರೀ ಎಸ್.ಆರ್. ಮೋರೆ : ಕರ್ನಾಟಕ ರಿಫಾರ್ಮ್ಸ್ ಪ್ರಾಜೆಕ್ಟ್ಸ್ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕೆ.ಜಿ.ಎಫ್.ಗೆ ಯಾವುದು ಅನ್ವಯವಾಗುತ್ತದೆ ಎಂಬುದನ್ನಾದೂ ನೀವು ಹೇಳಿ.

ಶ್ರೀ ಎಸ್.ಆರ್. ಮೋರೆ : ಐ.ಡಿ.ಎಫ್.ಸಿ. ಯೋಜನೆಯಲ್ಲಿ ಈಗಾಗಲೇ ಕೆಲಸ ನಡೆಯುತ್ತಿದೆ.

Sri S. Rajendran : It is a very small project, why don't you take a big project to develop the KGF city?

Sri S.R. More : KGF city is not come under Asian Development Bank. You don't have so much resources.

ಅಧ್ಯಕ್ಷರು : ಮಾನ್ಯ ರಾಜೇಂದ್ರ್‌ರವರೆ, ಸಚಿವರು ಉತ್ತರ ಕೊಟ್ಟಿದ್ದಾರೆ. ನೀವು ಕೇಳಿದ್ದಕ್ಕೆಲ್ಲಾ ಉತ್ತರ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಕೆಲವು ಪ್ರಾಜೆಕ್ಟ್ಸ್ ಏನಿವೆ, ಅದರಲ್ಲಿ ಬರುವುದಿಲ್ಲ. ನಿಮ್ಮ ಕೆ.ಜಿ.ಎಫ್. ಯಾವ ಯೋಜನೆಯಲ್ಲಿ ಬರುತ್ತದೋ ಅದಕ್ಕೆ 550 ಲಕ್ಷ ರೂ ಕೊಡುತ್ತೇವೆಂದು ಹೇಳಿದ್ದಾರೆ. ಇನ್ನೇನು ಬಯಸುತ್ತೀರಿ ಅವರಿಂದ.

Sri S. Rajendran : I request my Hon'ble Minister to take up right now a big project. There is no infrastructure in KGF. What maximum you can do for my city you come forward and assure on this floor of the House.

ಶ್ರೀ ಎಸ್.ಆರ್. ಮೋರೆ : ಪರಿಶೀಲನೆ ಮಾಡುತ್ತೇನೆ.

Sri S. Rajendran : You please assure this House. Something should be done to develop my city.

ಶ್ರೀ ಎಸ್.ಆರ್. ಮೋರೆ : ಐ.ಡಿ.ಎಸ್.ಎಂ.ಟಿ. ಪ್ರಕಾರ ನಾವು ಈಗಾಗಲೇ ಕೆಲಸವನ್ನು ಆರಂಭ ಮಾಡಿದ್ದೇವೆ. ನಿಮ್ಮ ಮುನಿಸಿಪಾಲಿಟಿಯವರಿಗೆ, ಡೆಲ್ಲಿಯವರು ಕ್ಲಾರಿಫಿಕೇಷನ್ ಕೇಳಿದ್ದಾರೆ, ಈ ವಾರ ಕ್ಲಾರಿಫಿಕೇಷನ್ ಕ್ಲಿಯರ್ ಮಾಡಿದರೆ, ಮುಂದಿನ ವಾರವೇ ಶುರು ಮಾಡುತ್ತೇವೆ.

Sri S. Rajendran : If decision is not taken in the right time, you supersede the Municipality. For the past 4 1/2 years no development had taken place at all.

ಶ್ರೀ ಎಸ್.ಆರ್. ಮೋರೆ : ಆ ಮುನಿಸಿಪಾಲಿಟಿಗೆ ಸಂಬಂಧಿಸಿದ ಅಧಿಕಾರಿಯನ್ನು ಇವತ್ತೇ ಕಳುಹಿಸುತ್ತೇನೆ.

ಗೌರಿಬಿದನೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳಿಗೆ ನಿರ್ಮಿತವಾದ ಷೆಡ್ಡುಗಳನ್ನು ಕೈಗಾರಿಕೇತರ ಉದ್ದೇಶಗಳಿಗೆ ಬಳಕೆ

135(883) : ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಭಾರಿ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲಭೂತ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಸಣ್ಣ ಕೈಗಾರಿಕೆಗಳನ್ನು ತೆರೆಯಲು ವಿಶ್ವ ಯೋಜನೆಯಡಿಯಲ್ಲಿ 4 ಕಡೆಗಳಲ್ಲಿ ಶೆಡ್‌ಗಳನ್ನು ನಿರ್ಮಿಸಿ ಸಂಬಂಧಪಟ್ಟವರಿಗೆ ಈ ಹಿಂದೆ ನೀಡಲಾಗಿದೆ. ಶೆಡ್‌ಗಳು ಸೂಚಿತ ಉದ್ದೇಶಕ್ಕೆ ಉಪಯೋಗಿಸದೇ ಅಕ್ರಮ ಕೆಲಸಗಳಿಗೆ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಷೆಡ್‌ಗಳನ್ನು ಅನ್ಯ ಉದ್ದೇಶಗಳಿಗೆ (ಕೈಗಾರಿಕೇತರ) ಬಳಸಲು ಕಾನೂನಿನಲ್ಲಿ ಅವಕಾಶವಿದೆಯೆ;